ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 13-11-2017.**

**ಪಾಟೀ ಸವಾಲು ಶ್ರೀ ಎಸ್.ಆರ್.ಎಸ್. 6ನೇ ಪ್ರತಿವಾದಿ ಪರ ವಕೀಲರಿಂದ.**

ನನ್ನ ತಂದೆಯ ಹೆಸರು ರಂಗಪ್ಪ. ಅವರಿಗೆ ಆರು ಜನ ಮಕ್ಕಳು. ಇಬ್ಬರೂ ಗಂಡು ಮಕ್ಕಳು ಮತ್ತು ನಾಲ್ಕು ಹೆಣ್ಣು ಮಕ್ಕಳು. ದಾವೆಯನ್ನು ಒಟ್ಟು 13 ಎಕರೆಗೆ ಸಲ್ಲಿಸಿದ್ದೇನೆ. ದಾವಾ ಸ್ವತ್ತುಗಳು ನನ್ನ ತಂದೆ ಕ್ರಯಕ್ಕೆ ಪಡೆದಿರುವ ಸ್ವತ್ತುಗಳು. ನನ್ನ ಮದುವೆಯಾಗಿ 45 ವರ್ಷಗಳಾಗಿವೆ. ನನ್ನ ಮದುವೆಯನ್ನು ನನ್ನ ತಂದೆ ಮಾಡಿದ್ದರು.

ಐಟಂ ನಂ.4 ಸ್ವತ್ತನ್ನು ನನ್ನ ತಂದೆ ನನ್ನ ತಾಯಿಯ ಹೆಸರಿಗೆ ಕ್ರಯಕ್ಕೆ ಬರೆಸಿದ್ದರು. ಐಟಂ ನಂ.4 ರ ಸ್ವತ್ತನ್ನು ನನ್ನ ಮದುವೆಯಾದ ಮೇಲೆ ಕ್ರಯಕ್ಕೆ ಪಡೆದಿದ್ದಾರೆ. ನನ್ನ ತಾಯಿ ಜೀವಂತ ಇಲ್ಲ. ನನ್ನ ತಾಯಿ ತೀರಿಕೊಂಡು ಸುಮಾರು 9 ವರ್ಷಗಳಾಗಿವೆ. ಐಟಂ ನಂ.4 ಸ್ವತ್ತನ್ನು ನನ್ನ ತಾಯಿ ಸ್ವಂತ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಐಟಂ ನಂ.4 ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಳ್ಳುವ ಸಮಯಕ್ಕೆ ನನ್ನ ವಿವಾಹವಾಗಿದ್ದ ಕಾರಣ ಯಾರು ಹಣ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟಾಗಿ ಕ್ರಯಕ್ಕೆ ತೆಗೆಯಲಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಾಯಿ ಐಟಂ ನಂ.4 ರ ಸ್ವತ್ತು ತನ್ನ ಸ್ವಂತ ಆಸ್ತಿ ಕಾರಣ 2ನೇ ಪ್ರತಿವಾದಿ ಹೆಂಡತಿ ಮೀನಾಕ್ಷಿ ರವರ ಹೆಸರಿಗೆ ದಿನಾಂಕ:25.11.1995 ರಂದು ನೊಂದಾಯಿತ ಮರಣ ಶಾಸನ ಬರೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ರವೀಶ ಮತ್ತು ಮೀನಾಕ್ಷಿ ರವರು ನನ್ನ ತಾಯಿಯನ್ನು ನೋಡಿಕೊಳ್ಳದಿದ್ದ ಕಾರಣ ದಿನಾಂಕ:15.07.2005 ರಂದು ಮರಣ ಶಾಸನವನ್ನು ರದ್ದುಪಡಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನನ್ನ ತಂದೆ ತೀರಿಕೊಂಡು ಇಲ್ಲಿಗೆ ಸುಮಾರು 30 ವರ್ಷಗಳಿಗಿಂತ ಹೆಚ್ಚಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡನ ತಂದೆಯ ಹಸೆರು ತಮ್ಮಯ್ಯ. ಸದರಿ ವಿಲ್‌ನ್ನು ರದ್ದುಪಡಿಸಿದ ನಂತರ ನನ್ನ ತಾಯಿ 6ನೇ ಪ್ರತಿವಾದಿಗೆ ಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ನನ್ನ ಯಜಮಾನರು ಸಾಕ್ಷಿದಾರರಾಗಿ ಸಹಿ ಹಾಕಿದ್ದರು ಎಂದರೆ ಸರಿಯಲ್ಲ. ಐಟಂ ನಂ.4 ರ ಸ್ವತ್ತಿನ ಮೇಲೆ ನನಗೆ ಯಾವುದೆ ಹಕ್ಕು, ಅಧಿಕಾರಿ ಇಲ್ಲದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂರೆ ಸರಿಯಲ್ಲ. ದಾವಾ ಐಟಂ ನಂ.4 ರ ಸ್ವತ್ತು ಸುಮಾರು 8 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಗೆ ಮೋಸ ಮಾಡುವ ಸಲುವಾಗಿ ವಾದಿ ಮತ್ತು ಇತರೆ ಜೊತೆ ಸೇರಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಕುಮಾರಿ ಸಿ.ಸಿ. 2ನೇ ಪ್ರತಿವಾದಿ ಪರ ವಕೀಲರಿಂದ.**

ನಾನು ವಿದ್ಯಾಭ್ಯಾಸ ಮಾಡಿಲ್ಲ. ದಾವಾ ವಸ್ತು ವಿಷಯವನ್ನು ನಾನೇ ಹೇಳಿ ಬರೆಸಿದ್ದೇನೆ. ದಾವಾ ಷೆಡ್ಯೂಲ್ ಐಟಂ ನಂ.1, 2 ಮತ್ತು 'ಬಿ' ಷೆಡ್ಯೂಲ್ ಸ್ವತ್ತು ನನ್ನ ತಂದೆ ಕ್ರಯಕ್ಕೆ ಪಡೆದಿರುವ ಸ್ವತುಗ್ಗಳು ಎಂದರೆ ಸರಿ. ಸದರಿ ಸ್ವತುಗ್ತಳನ್ನು ಯಾವಾಗ ಯಾರಿಂದ ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತುಗ್ತಳಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ.1 ಮತ್ತು 2 ಮೂಲ ಸರ್ವೆ ನಂಬರ್ ಗೊತ್ತಿಲ್ಲ.

ನನ್ನ ತಂದೆ ಹಾಗೂ 1 ಮತ್ತು 2ನೇ ಪ್ರತಿವಾದಿ 1994ನೇ ಇಸವಿಯಲ್ಲಿ ಭಾಗವಾಗಿದ್ದಾರೆ ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಗಳು 1994 ರಿಂದ ಪ್ರತ್ಯೇಕವಾಗಿ ವಾಸವಾಗಿದ್ದಾರೆ

ಎಂದರೆ ಸರಿ. ಐಟಂ ನಂ.3 ರ ಸ್ವತ್ತು 2ನೇ ಪ್ರತಿವಾದಿಗೆ ಮಂಜೂರಾಗಿರುವ ಸ್ವತ್ತು ಎಂದರೆ ಸಾಕ್ಷಿಯು ತನ್ನ ತಂದೆ ತೀರಿಕೊಂಡ ಮೇಲೆ ಒಟ್ಟಾಗಿ ಮಂಜೂರಾಗಿದೆ ಎಂದು ನುಡಿಯುತ್ತಾರೆ. ಐಟಂ ನಂ.3 ರ ಸ್ವತ್ತಿನ ಸರ್ವೆ ನಂಬರ್ ಗೊತ್ತಿಲ್ಲ, 2ನೇ ಪ್ರತಿವಾದಿ ಐಟಂ ನಂ.3 ಸ್ವತ್ತಿಗೆ ಎಷ್ಟು ಹಣ ಪಾವತಿ ಮಾಡಿದದ್ದಾರೆ ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆತನು ವ್ಯವಹಾರ ಮಾಡತ್ತಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಬದುಕಿರುವಾಗಲೇ 1 ಮತ್ತು 2ನೇ ಪ್ರತಿವಾದಿಗೆ ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿಗಳಿಲ್ಲ ಎಂದರೆ ಸರಿ. 2ನೇ ಪ್ರತಿವಾದಿಗೂ ನನಗೂ ಯಾವುದೆ ವ್ಯಯಕ್ತಿಕ ದ್ವೇಷ ಇಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗಾಂಶ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸರ್ವೆ ನಂಬರ್‌ಗಳು ಗೊತ್ತಿಲ್ಲ. ಆದರೆ ಚಕ್ ಬಂದಿ ಗೊತ್ತು. ಐಟಂ ನಂ.3 ರ ಸ್ವತ್ತಿನ ಮೇಲೆ ನನಗೆ ಯಾವುದೇ ಭಾಗಾಂಶದ ಹಕ್ಕಿಲ್ಲ ಎಂದರೆ ಸರಿಯಲ್ಲ. ಐಟಂ ನಂ.3 ಮತ್ತು 'ಸಿ' ಷೆಡ್ಯೂಲ್ ಸ್ವತ್ತುಗಳ ಮೇಲೆ ನನಗೆ ಯಾವುದೆ ಹಕ್ಕಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***3 ಮತ್ತು 4ನೆ ಪ್ರತಿವಾಗಳು ಹಾಗೂ ವಕೀಲರು ಗೈರು ಹಾಜರು ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ